ಇರಲಿ ಡಿಪಾರ್ಟ್‌ಮೆಂಟ್‌ಗೆ ಕಳಿಹಿಸಿ, ನನಗೆ ಒಂದು ಕಾಪಿ ಕೊಡಿ, ಕ್ರಮ ತೆಗೆದುಕೊಳ್ಳದಿದ್ದರೆ ಆಗ ನನ್ನನ್ನು ಕೇಳಿ.

ಶ್ರೀ ಆರ್. ದಯಾನಂದರಾವ್.—ಈಗಾಗಲೇ ಅಪ್ಲಿಕೇಷನ್ಸ್ ಕೊಟ್ಟು ಆರು ತಿಂಗಳಾಗಿದೆ. ನನಗೆ ಅವರಿಂದ ಉತ್ತರ ಸಿಕ್ಕಿಲ್ಲ.....

ಉಪಾಧ್ಯಕ್ಷೆಯರು.—ಅವರು ಹೇಳುವುದನ್ನು ಕೇಳಿ, ಅವರು ಉತ್ತರ ಮುಗಿಸಲಿ.....

SRI AZIZ SAIT.—By taking action we will be helping our own self We will be cleaning what is called the society. Everybody has to keep a vigil as watchdog. As regards Mr. Dayananda's point, I have to tell that I cannot treat the issue of ration cards like that of loan melas. He said he has given about 4 to 5 thousand applications six months back. But I was not there for six months. I am there since two months.

SRI R. DAYANANDA RAO.—How can we face the constituency people? The people don't allow me to go inside. What action you are going to take?

MADAM DEPUTY CHAIRMAN.—That is what he is answering.

SRI AZIZ SAIT.—The department is there to look into the persons who are not given ration cards. Only deserving will be issued, not all Tom, Dick and Harry.

SRI R. DAYANANDA RAO.—We don't want you to issue to Tom, Dick and Harry. We want you to issue to the poor people.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಉಪಾಧ್ಯಕ್ಷಿಣಿಯರೇ, ಮಾನ್ಯ ಮಂತ್ರಿಗಳು ಇವತ್ತು ಸ್ಪಷ್ಟವಾಗಿ ಹೊರಗಡೆ ಬಂದಿದ್ದಾರೆ. ಅವರು ಮಾತನಾಡಿದ ಧಾಟಿ ನೋಡಿದಾಗ, ಹಸಿರು ಕಾರ್ಡಿನ ಬಣ್ಣ ಬದಲಾವಣೆ ಮಾಡುವುದಕ್ಕೆ ತಯಾರು ಇದ್ದಾರೆ, ಏಕೆ ಬಣ್ಣ ಬದಲಾವಣೆ ಮಾಡಬೇಕು ? ಏತಕ್ಕೆ ಬಣ್ಣ ಬದಲಾವಣೆ ಮಾಡಬೇಕು? ಏತಕ್ಕೆಂದರೆ ಅದು ನಾವು ಮಾಡಿದ್ದುದು ಎಂದು ಒಂದೇ ಕಾರಣ.

ಶ್ರೀ ಅಜೀಜ್ ಸೇಠ್.—ಅದರಲ್ಲಿ ಮೋಸ ಆಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಏನು ಮೋಸ ಆಗಿದೆ. ಹಸಿರು ಕಾರ್ಡ್ ವಿಚಾರದಲ್ಲಿ ಮಾನ್ಯ ಸದಸ್ಯರು ಮತ್ತು ಮಾನ್ಯ ಮಂತ್ರಿಗಳು ರಾಜಕೀಯ ಬೆರೆಸುವುದಕ್ಕೆ ಹೊರಟಿದ್ದಾರೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಇವತ್ತು ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಆದರಿಂದ ಸಮಗೆ ಸಮಾಧಾನವಾಗಿಲ್ಲ. ಬಡವರು ತಿನ್ನತಕ್ಕಂಥ ಅಕ್ಕಿಯ ಬೆಲೆಯನ್ನು ಜಾಸ್ತಿ ಮಾಡುವುದಕ್ಕೆ ಹೊರಟಿದ್ದಾರೆ. ಇದು ಬಡವರ ವಿರುದ್ಧವಾದ ಕಾರ್ಯಕ್ರಮವಾಗಿದೆ, ರಾಜ್ಯದ ೩೦ ಲಕ್ಷ ಕಟುಂಬಗಳಿಗೆ ಅನ್ಯಾಯ ಮಾಡತಕ್ಕ ಕಾರ್ಯಕ್ರಮ ಇದು. ಹಾಗಾದರೆ ಇದರಿಂದ ಯಾರಿಗೆ ಉಪಯೋಗವಾಗುತ್ತದೆ? ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸ್ ಬಗ್ಗೆ ತಾವು ಮಾತನಾಡಿದಿರಾ? ಅವರ ವೇಜಸ್ ಜಾಸ್ತಿ ಮಾಡಿದ್ದೀರಾ? ಇದನ್ನು ನಾವೆಲ್ಲರೂ ತೀವ್ರವಾಗಿ ಪ್ರತಿಭಟನೆ ಮಾಡುತ್ತೇವೆ, ನಿಮ್ಮ ಉತ್ತರದಿಂದ ಸಮಾಧಾನವಾಗಿಲ್ಲ. ಬಡ ಜನರ ವಿರುದ್ಧ ಕೆಲಸ ಮಾಡುತ್ತಿದ್ದೀರಿ. ನಾವು ಇದಕ್ಕೊಸ್ಕರ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಜನತಾ ದಳದ ಸದಸ್ಯರು ವಿರೋಧ ಪಕ್ಷದ ಉಪನಾಯಕ ಶ್ರೀ ಪಿ. ಜಿ. ಆರ್. ಸಿಂಧ್ಯ ಅವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ಅಜೀಜ್ ಸೇಠ್.—ಇದೇ ರಾಜಕೀಯ ಎಂದು ಹೇಳುವುದು. ನಾವು ಏನೂ ಜಾಸ್ತಿ ಮಾಡಿಲ್ಲ. ಇವರ ಕೇಂದ್ರ ಸರಕಾರದವರೇ ೯೫ ರೂಪಾಯಿ ಜಾಸ್ತಿ ಮಾಡಿರುತ್ತಾರೆ. ಆದುದರಿಂದ ೪೫ ಪೈಸೆ ಜಾಸ್ತಿಯಾಗಿದೆ. ಇವರು ಮಾಡಿದ್ದೇ ನಾವು ಮಾಡಿದ್ದೇವೆ.

(ಗೊಂದಲ)